ಮಂತ್ರಿಗಳ ಹೇಳಿಕೆ

ವಿಷಯ (i) : ಬೆಂಗಳೂರು ವಿಮಾನ ನಿಲ್ದಾಣಕ್ಕೆ ಕೆ.ಇ.ಬಿ. ಅಧ್ಯಕ್ಷರು ಸಂಪರ್ಕಾಧಿಕಾರಿ ಅವರಿಗೆ ಹೇಳಿ ವಿದ್ಯುತ್ ಸರಬರಾಜನ್ನು ನಿಲ್ಲಿಸಿದ್ದರ ಬಗ್ಗೆ

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಅಧ್ಯಕ್ಷರ ಬಗ್ಗೆ ಮಾಡಿದ ಆರೋಪದ ಬಗ್ಗೆ ಮತ್ತು ವಿಮಾನ ನಿಲ್ದಾಣಕ್ಕೆ ವಿದ್ಯುಚ್ಛಕ್ತಿ ಸರಬರಾಜನ್ನು ನಿಲ್ಲಿಸಿದ್ದಾರೆ ಎಂಬ ವಿಷಯದ ಬಗ್ಗೆ, ನಾನು ಒಂದು ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದೆ. ಅದರಂತೆ ತಮ್ಮ ಅನುಮತಿ ಪಡೆದು ಈ ಕೆಳಕಂಡ ಹೇಳಿಕೆಯನ್ನು ನೀಡಿರುತ್ತೇನೆ.

ದಿನಾಂಕ 26-9-1991ರ ಬೆಳಿಗ್ಗೆ 10.30 ಘಂಟೆಗೆ ತುರ್ತು ಕೆಲಸಕ್ಕಾಗಿ ಒ ಅಂಡ್ ಎಂ ಸಿಬ್ಬಂದಿಯು ಹೆಚ್.ಎ.ಎಲ್. ಸ್ಟೇಷನ್‌ನ ಎಪ್-6 ಇಂಡಸ್ಟ್ರೀಯಲ್ ಫೀಡರ್ ನ ಲೈನ್ ಕ್ಲೀಯರನ್ನು ದೊರಕಿಸಿಕೊಟ್ಟಿತು. ಈ ಫೀಡರ್, ವಿಮಾನ ನಿಲ್ದಾಣದ ಲೋಡ್ ಅನ್ನು ಹಾಗೂ ಇತರ ಗ್ರಾಹಕರಿಗೆ ವಿದ್ಯುತ್‌ಚ್ಛಕ್ತಿಯನ್ನು ಪೂರೈಸುತ್ತದೆ.

ಮಧ್ಯಾಹ್ನ ಒಂದು ಗಂಟೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಅಧ್ಯಕ್ಷರು ವಿಮಾನ ನಿಲ್ದಾಣಕ್ಕೆ ಬರುವ ದಾರಿಯಲ್ಲಿ ವಿಮಾನ ನಿಲ್ದಾಣದ ಸಮೀಪ ಪವರ್ ಲೈನಿನ " ಜಂಪ್" ಗಳು ತೂಗಾಡುತ್ತಿದ್ದುದನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಯಾವ ಸಿಬ್ಬಂದಿಯು ಆ ಸ್ಥಳದಲ್ಲಿ ಇಲ್ಲದೇ ಇರುವುದನ್ನು ಗಮನಿಸಿದರು. ವಿಮಾನ ನಿಲ್ದಾಣಕ್ಕೆ ಬಂದತಕ್ಷಣ ಅಧ್ಯಕ್ಷರು ವಿದ್ಯುತ್ ಪೂರೈಕೆ ಏಕೆ ಇಲ್ಲ? ಎನ್ನುವುದನ್ನು ಸಾರ್ವಜನಿಕ ಸಂಪರ್ಕಾಧಿಕಾರಿಗಳನ್ನು ವಿಚಾರಿಸಿದರು. ಬೇರೆ ಸ್ಥಳದಲ್ಲಿನ ತೊಂದರೆಯನ್ನು ನಿವಾರಿಸುವ ಸಲುವಾಗಿ ಒ ಅಂಡ್ ಎಂ. ಸಿಬ್ಬಂಧಿಯು ಬೆಳಿಗ್ಗೆ 10.30 ಗಂಟೆಗೆ ಲೈನ್ ಕ್ಲಿಯರ್ ನ್ನು ಪಡೆದಿರುವುದಾಗಿ ಸಾರ್ವಜನಿಕ ಸಂಪರ್ಕಾಧಿಕಾರಿಗಳಿಂದ ತಿಳಿದು ಬಂದಿತು. ವಿಮಾನ ನಿಲ್ದಾಣದ ಹತ್ತಿರ ಜಂಪ್‌ಕಟ್ ಆಗಿರುವುದು ಆ ಸಿಬ್ಬಂದಿಗೆ ಗೊತ್ತಿರದೇ. ಆ ಲೈನಿಗೆ ಸಂಬಂಧ ಪಟ್ಟಂತೆ ಬೇರೆಡೆ ಈ ಕೆಲಸ ಮಾಡುತ್ತಿದ್ದಿರಬಹುದು. ಮತ್ತು ಇದು ಹೆಚ್ಚಿನ ಅಡಚಣೆಗೆ ಕಾರಣವಾಗಬಹುದಾದ್ದರಿಂದ ವಿಮಾನ ನಿಲ್ದಾಣದ ಹತ್ತಿರದ ತೊಂದರೆಯನ್ನು ನಿವಾರಿಸದೇ ಈ ಲೈನನ್ನು ಚಾರ್ಜ್ ಮಾಡದಿರಲು ಹೆ.ಎ.ಎಲ್. ಸಬ್ ಸ್ಟೇಶನ್‌ಗೆ ತಿಳಿಸುವಂತೆ ಅಧ್ಯಕ್ಷರು ಸಾರ್ವಜನಿಕ ಸಂಪಾರ್ಕಾಧಿಕಾರಿಗೆ ದೂರವಾಣಿ ಮೂಲಕ ನಿರ್ದೇಶನ ನೀಡಿದರು. ಮಧ್ಯಾಹ್ನ 1.20 ಗಂಟೆಗೆ ಒ ಅಂಡ್ ಎಂ ಸಿಬ್ಬಂದಿಯು ಈ ಮಾರ್ಗದ ಲೈನ್‌ನ್ನು ಕ್ಲಿಯರ್ ಮಾಡಿತು. ಅಧ್ಯಕ್ಷರು ಗಮನಿಸಿದ ಎರಡನೇ ಅಡಚಣೆಯನ್ನು ನಿವಾರಿಸುವಂತೆ ಈ ಸಿಬ್ಬಂದಿಗೆ ತಿಳಿಸಲಾಯಿತು.ಈ ಅಡಚಣೆಯನ್ನು ನಿವಾರಿಸಿದ ನಂತರ ಸುಮಾರು 4.00 ಗಂಟೆಗೆ ಲೈನನ್ನು ಕ್ಲಿಯರ್ ಮಾಡಿ ಚಾರ್ಜ್ ಮಾಡಲಾಯಿತು. ಹಾಗೂ ಸರಿಹೋಯಿತು.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ ಈ ಒಂದು ಹೇಳಿಕೆಯನ್ನು ಸುಳ್ಳು ಅಂತಲೂ ಹೇಳಬಹುದು. ನಾನು ಇದನ್ನು ಇಲ್ಲಿ ಎತ್ತಿದ ಉದ್ದೇಶ, ಈ ಕರ್ನಾಟಕ ಎಲೆಕ್ಟ್ರಿಸಿಟಿ ಶಾಸನಕ್ಕೆ ವಿರುದ್ಧವಾದಂತಹ ಆದೇಶವನ್ನು ಕೊಡುವುದಕ್ಕೆ ಈ ಅಧ್ಯಕ್ಷರಿಗೆ ಅವಕಾಶ ಇದೆಯೇ ಎನ್ನತಕ್ಕಂಥಾದ್ದು ನನ್ನ ಮೂಲ ಪ್ರಶ್ನೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಅಂಥದ್ದು ನಡೆದೆ ಇಲ್ಲವಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಹೇಳುತ್ತೇನೆ. ಅವರು ಸಂಪರ್ಕಾಧಿಕಾರಿಯ ಮೂಲಕ ಆದೇಶವನ್ನು ಕೊಟ್ಟಿದ್ದೇನೆಂದು ಹೇಳುತ್ತಾರೆ. ಅಲ್ಲಿ ಜಂಪು ತೂಗಾಡುತ್ತಿತ್ತು. ಅಧ್ಯಕ್ಷರು ಕಾರಿನಲ್ಲಿ ಹೋಗುವಾಗ. ಜಂಪು ತೂಗಾಡುತ್ತಿರುವುದನ್ನು ನೋಡಿದರು. ಇದು ಬಹಳ ವಿಜಿಲೆಂಟ್.

ಅಧ್ಯಕ್ಷರು : ಆ ಕಾರಿಗೆ ಟಾಪ್ ಇತ್ತೋ ಇಲ್ಲವೋ?

ಶ್ರೀ ಡಿ.ಬಿ. ಚಂದ್ರೇಗೌಡ : ಆ ವೈರ್ ಮೇಲೆ ಇದ್ದ ಜಂಪು ತೂಗಾಡುತ್ತಿತ್ತು. ಏನು ತೂಗಾಡುತ್ತಿತ್ತು? ನಾನೊಂದು ಪ್ರಶ್ನೆ ಕೇಳುತ್ತೇನೆ. ಜಂಪು ತೂಗಾಡುತ್ತಿತ್ತೋ ಅದನ್ನು ಇವರು ನೋಡಿದರೋ ಬಿಟ್ಟರೋ ಅದಲ್ಲ. ಹೀಗೆ ಅನಧಿಕೃತವಾದಂತಹ ಆದೇಶವನ್ನು ಕೊಡುವುದಕ್ಕೆ ಇವರಿಗೆ ಅವಕಾಶ ಇಲ್ಲ. ಹೀಗೆ ಅನಧಿಕೃತವಾದ ಆದೇಶವನ್ನು ಕೊಟ್ಟರೆ 2 ವರ್ಷ ಶಿಕ್ಷೆ ಅನುಭವಿಸಬೇಕಾಗುತ್ತದೆ ಮತ್ತು ಒಂದು ಸಾವಿರ ರೂಪಾಯಿ ಜುಲ್ಮಾನೆ ಕೊಡಬೇಕಾಗುತ್ತದೆ. ಎನ್ನತಕ್ಕಂಥಾದ್ದು ನನ್ನ ಅಪಾದನೆ. ಆದ್ದರಿಂದ ಇವರು ತಪ್ಪು ಮಾಡಿದ್ದಾರೆಂದು ಒಪ್ಪಿಕೊಂಡರೆ ಇವರ ವಿವರಣೆ ಇದೆಯಲ್ಲ. ಜಂಪು ತೂಗಾಡುತ್ತಿತ್ತು ಎಂದು ಈ ಜಂಪು ತೂಗಾಡುತ್ತಿತ್ತು ಎನ್ನತಕ್ಕಂಥಾದ್ದು ಆಮೇಲೆ ಆಲೋಚನೆ ಮಾಡಿದಂತಹ ಕಲ್ಪನೆ. ಈ ಕಲ್ಪನೆ ತಾನೆ ನೋಡಿದ್ದೇನೆ. ಜಂಪು ತೂಗಾಡುತ್ತಿತ್ತು ಅಂದರೆ ಅಲ್ಲಿನ ಇಂಜನೀಯರ್ಸ್ ನಿದ್ದೆ ಮಾಡುತ್ತಿದ್ದರೇನು? ಅವರಿಗೆ ಬೇರೆ ಕೆಲಸವೇನೂ ಇರಲಿಲ್ಲವೇನು? ಇಲ್ಲಿ ಲೈನ್ ಕ್ಲಿಯರ್ ಅಂತ ಬರೆಯುತ್ತಾರೆ. 1-10 ಕ್ಕೆ ಚಾರ್ಜ್ ಮಾಡುವುದಕ್ಕೆ ಲೈನ್ ಕ್ಲಿಯರ್ ಅಂತ ಸಂಬಂಧಪಟ್ಟ ಲಾಗ್ ಪುಸ್ತಕದಲ್ಲಿ ಬರೆಯುತ್ತಾರೆ ನಾನು ಆ ಎಲ್ಲಾ ದಾಖಲೆಗಳನ್ನು ಇಲ್ಲಿ ಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಈ ರೀತಿಯಾಗಿ ತಾವು ಸರ್ವಾಧಿಕಾರಿ ಮನೋಭಾವವುಳ್ಳ ಒಬ್ಬ ಅಧಿಕಾರಿಗೆ ರಕ್ಷಣೆ ಕೊಡತಕ್ಕಂಥಾದ್ದು ಮತ್ತು ಅವರನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಿರತಕ್ಕಂಥಾದ್ದು ತುಂಬಾ ಶೋಚನೀಯವಾದುದು. ತಪ್ಪು ಮಾಡಿದ್ದರೆ ತಪ್ಪು ಆಗಿದೆ ಎಂದು ಹೇಳತಕ್ಕಂಥಾದ್ದು ತಪ್ಪನ್ನು ಸರಿಪಡಿಸಿಕೊಳ್ಳತಕ್ಕಂಥ ವ್ಯವಸ್ಥೆ ಇಲ್ಲ. ರಕ್ಷಣೆ ಮಾಡತಕ್ಕಂಥ ಹೇಳಿಕೆಯನ್ನು ಮಂತ್ರಿಗಳು ಇಲ್ಲಿ ಕೊಡುತ್ತಾರೆ ಅಂತ ಹೇಳಿದರೆ, ನಾವು ಈ ಶಾಸನ ಸಭೆಯಲ್ಲಿ ಹೇಗೆ ಕೆಲಸ ಮಾಡಬೇಕು? ಅದಕ್ಕಾಗಿ ನಾನು ಹೇಳುತ್ತೇನೆ ಇದನ್ನು ವಿಚಾರಣೆ ಮಾಡುವುದಕ್ಕೆ ಒಂದು ತನಿಖಾ ಆಯೋಗ ರಚನೆ ಮಾಡಿ. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮೂಲಕ ಮಾಡಿಸಿ. ಬಹಳ ದಿವಸ ಆಗುವುದಿಲ್ಲ. ಇದು ಮಾಡಿರತಕ್ಕಂಥಾದ್ದು ಸರಿಯೇ? ಇವರು ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಿದ್ದಾರೆಯೇ? ಹಾಗೆ ಮಾಡದಿದ್ದರೆ ಶಾಸನಬದ್ಧವಾಗಿ ವಿಧಿಸತಕ್ಕಂಥ ಒಂದು ಶಿಕ್ಷೆಗೆ ಅವರು ಶಿಕ್ಷಾರ್ಹರಾಗುತ್ತಾರೆಂಬುದನ್ನು ತಾವು ಗಮನಿಸಬೇಕು. ಮಾನ್ಯ ಪಾರ್ಲಿಮೆಂಟರಿ ಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ. ಇದನ್ನು ತಾವು ಲಘುವಾಗಿ ತೆಗೆದುಕೊಳ್ಳಬೇಡಿ. ಆಡಳಿತದಲ್ಲಿ ಇಂತಹ ದೋಷವನ್ನು ಎತ್ತಿ ಹಿಡಿಯತಕ್ಕಂಥ ಜವಾಬ್ದಾರಿಯುತವಾದ ಕೆಲಸವನ್ನು ನಾವು ಇಲ್ಲಿ ಮಾಡುತ್ತೇವೆ. ಹೀಗೆ ಮಾಡತಕ್ಕಂಥಾದ್ದು ಬರೀ ಬಾಯಿ ತೀಟೆಗೆ ಮಾಡಿದಂತಹ ಕೆಲಸಗಳು ಆಗಬಾರದು. ನಮಗೂ ಅಷ್ಟೇ ಜವಾಬ್ದಾರಿ ಇದೆ. ಅನ್ನತಕ್ಕಂಥಾದ್ದನ್ನೂ ತಾವು ಗಮನದಲ್ಲಿಟ್ಟು ಕೊಳ್ಳಬೇಕು. ಆದ್ದರಿಂದ ನಾನು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ ಇಂತಹ ಒಂದು ಜವಾಬ್ದಾರಿ ರಹಿತವಾದ

ಹೇಳಿಕೆಯನ್ನು ನಾವು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದನ್ನು ತನಿಖೆ ಮಾಡಿಸುತ್ತೀರಾ ಎನ್ನುವ ಮಾತನ್ನು ನಾನು ತಮ್ಮಿಂದ ಕೇಳುತ್ತೇನೆ.

ಶ್ರೀ ಎಚ್. ಏಕಾಂತಯ್ಯ (ಚಿತ್ರದುರ್ಗ) : ಮಾನ್ಯ ಅಧ್ಯಕ್ಷರೇ, ಒಂದು ತಪ್ಪನ್ನು ಮುಚ್ಚಿಕೊಳ್ಳುವುದಕ್ಕೆ ಹೋಗಿ ಮತ್ತೊಂದು ತಪ್ಪನ್ನು ಅಥವಾ ಸತ್ಯವಲ್ಲದ ವಿಚಾರವನ್ನು ಮಾನ್ಯ ಸಚಿವರು ಹೇಳುತ್ತಿದ್ದಾರೆ. ೨ ದಿನ 10-30ಕ್ಕೆ ಲೈನ್ ಕ್ಲಿಯರ್‌ನ್ಸ್ ಕೊಟ್ಟಿರಿ. ಆದಾದ ಮೇಲೆ ಈ ಘಟನೆ 1-20 ರಲ್ಲಿ ನಡೆಯಿತು. ಆದಾದ ಮೇಲೆ ಸಿಟ್ಟಿನಿಂದ ಈ ಒಂದು ಆದೇಶವನ್ನು ಕೆಇಬಿ ಅಧ್ಯಕ್ಷರು ನೀಡಿದರು. ಅದಕ್ಕಿಂತ ಹೆಚ್ಚಾಗಿ ಲಾಗ್ ಪುಸ್ತಕದಲ್ಲಿ ಸಂಬಂಧಪಟ್ಟವರು ಅವರ ಹೆಸರನ್ನು ಬರೆದಿದ್ದರು. ಅದನ್ನು ನೀವು ಅಳಿಸಿಹಾಕಲು ಪ್ರಯತ್ನ ಪಟ್ಟರೂ ಅದು ಸಾಧ್ಯವಾಗಲಿಲ್ಲ. ನಿನ್ನೆಯ ದಿವಸ. ಆದಾದ ಮೇಲೆ ಅನಿವಾರ್ಯವಾಗಿ ತಾವು ಈ ತಪ್ಪನ್ನು ಮುಚ್ಚಿಕೊಳ್ಳುವುದಕ್ಕೆ ಬೇರೆ ರೀತಿಯ ವಿವರಣೆ ಕೊಡಲಿಕ್ಕೆ ಪ್ರಯತ್ನ ಮಾಡಿದಿರಿ. ಅದರ ಸತ್ಯಾಸತ್ಯತೆ ತಮಗೆ ಗೊತ್ತಿದೆ. ಇದರ ಬಗ್ಗೆ ಬಹುಶಃ ನಾನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನಾನು ತಮ್ಮನ್ನು ಕೇಳುವುದಿಷ್ಟೇ ಈ ರೀತಿ ಹಿರಿಯ ಅಧಿಕಾರಿಯಗಳು ಕಾನೂನಿಗೆ ವಿರುದ್ಧವಾಗಿ ತಮಗಿಷ್ಟ ಬಂದಂತೆ ರೀತಿಯಲ್ಲಿ ವರ್ತನೆ ಮಾಡುವುದನ್ನು ತಾವು ಸಹಿಸಬಾರದು. ಈಗ ಅವರಿಗೆ ರಕ್ಷಣೆ ಕೊಡತಕ್ಕಂಥ ರೀತಿಯಲ್ಲಿ ಹೇಳಿಕೆಯನ್ನು ಕೊಡುದಾದರೆ ಒಂದು ಸಾರಿ ಲೈನ್ ಸ್ಪಡ್ ಪೊಲ್‌ಅನ್ನು ಪ್ರೊವೈಡ್ ಮಾಡುವುದಕ್ಕೆ ನೀವು ಲೈನ್ ಕ್ಲಿಯರ್ ಅನ್ನು 10-30ಕ್ಕೆ ಕೊಟ್ಟಿದ್ದಿರಿ, ನೀವು ಜಂಪು ಹೋಗಿತ್ತು ಎನ್ನುವ ಮಾತನ್ನು ಹೇಳುತ್ತಿದ್ದೀರಿ, ಜಂಪು ಹೋಗಿದ್ದು ಕಾರಿನಲ್ಲಿ ಹೋಗುತ್ತಿದ್ದ ಕೆಇಬಿ ಅಧ್ಯಕ್ಷರಿಗೆ ದಾರಿಯಲ್ಲಿ ಕಾಣುತ್ತಿದೆಯೇ? ಈ ಮಾತನ್ನು ಹೇಳಿದ್ದಾರೆ.

MR : SPEAKER : But it is also possible, when you are driving, you can see the electrical lines hanging loosely.

SRI .H . EKANTHAIAH : This is a thing.ಅವರು ಏರ್‌ಪೋರ್ಟ್‌ಗೆ ಹೋಗಿ ಗಲಾಟೆ ಮಾಡಿಕೊಂಡ ಮೇಲೆ ಅದು ಇವರಿಗೆ ಜ್ಞಾಪಕಕ್ಕೆ ಬಂತೋ ಆ ಉದ್ದೇಶದಿಂದ ಒಂದು ತಪ್ಪನ್ನು ಮುಚ್ಚಿಕೊಳ್ಳುವುದಕ್ಕೆ ಮತ್ತೊಂದು ತಪ್ಪನ್ನು ಇಲ್ಲಿ ಹೇಳುವುದು ಸರಿಯಲ್ಲ. ಅವರು ಪ್ರಾಮಾಣಿಕವಾಗಿ ತಪ್ಪಾಗಿದೆ. ಸಿಟ್ಟಿನಿಂದ ಆವೇಶದಲ್ಲಿ ಹೇಳಿದೆ ಎನ್ನುವ ವಿವರಣೆಯನ್ನು ಕೊಟ್ಟಿದ್ದರೆ ನಾವು ಒಪ್ಪಿಕೊಳ್ಳಬಹುದಾಗಿತ್ತೇ ಹೊರತಾಗಿ ಒಂದು ತಪ್ಪನ್ನು ಮುಚ್ಚಿಕೊಳ್ಳುವುದಕ್ಕೆ ಮತ್ತೊಂದು ವಿಚಾರವನ್ನು ನೀವು ಕೃತಕವಾಗಿ ಅಂಕಾಕ್ ಮಾಡಿ ತಾವು ಹೇಳುವುದು ಸರಿಯಲ್ಲ. ನಿಮ್ಮ ಲಾಗ್ ಪುಸ್ತಕದಲ್ಲಿರುವ ಎಂಟ್ರೀಸ್ ತಾವು ನೋಡಿ. ಆಗ ತಮಗೆ ಅರ್ಥವಾಗುತ್ತದೆ. ಇದರಲ್ಲಿ ಏನೇನು ತಿದ್ದಿದ್ದಾರೆಂದು ನೋಡಿ. ಅವೆಲ್ಲವನ್ನೂ ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಒಟ್ಟಿನಲ್ಲಿ ಅದಂಥ ಘಟನೆಯನ್ನು ಮುಚ್ಚಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಅದು ಸರಿಯಲ್ಲ ಅದಂಥ ಘಟನೆಯನ್ನು ಒಪ್ಪಿಕೊಂಡು ಅದನ್ನು ಸರಿಪಡಿಸುವಂಥ ದಿಸೆಯಲ್ಲಾದರೂ ತಾವು ಕೆಲಸ ಮಾಡಿ. ಇಲ್ಲದಿದ್ದರೆ ಏನು ಭಾವನೆ ಬರುತ್ತದೆ? ತಪ್ಪು ಮಾಡಿದವರಿಗೆ ರಕ್ಷಣೆ ಕೊಡುತ್ತಿದ್ದೀರಿ ಎನ್ನುವ ಭಾವನೆ ನಮ್ಮಲ್ಲಿ ಬಂದರೆ ಅನಿವಾರ್ಯವಾಗಿ ನಾವು ಅದನ್ನು ಹೇಳಬೇಕಾಗುತ್ತದೆ. ತಾವು ಆ ಕೆಲಸವನ್ನು ಮಾಡಬಾರದೆಂದು ಅಧ್ಯಕ್ಷರ ಮುಖಾಂತರ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ನಾವು ಸಂಗ್ರಹಿಸಿದಂಥ ಮಾಹಿತಿ ಪ್ರಕಾರ ಏನಿದೆಯೆಂದು ಹೇಳಿದರೆ, ಅದು ನಿಜವಾಗಿ ಸಾಮಾನ್ಯ ಸಿಬ್ಬಂದಿ ಮಾಡಬೇಕಾದ ಕೆಲಸ. ಏರ್‌ಪೋರ್ಟ್‌ಗೆ ಹೋಗುವುವಾಗ ಅವರು ಛೇರ್ಮನ್ ಆಗಿ ಡಿಫೇಕ್ಟ್‌ನ್ನು ಪರಿಶೀಲಿಸಿ ಆ ಬಗ್ಗೆ ಅದನ್ನು ಸರಿಪಡಿಸತಕ್ಕಂಥ ಪ್ರಯತ್ನ ಮಾಡಿದ್ದಾರೆ. ಅದನ್ನು ನೋಡಿ ಸರಿ ಮಾಡತಕ್ಕದ್ದೇ ಸರ್ವಾಧಿಕಾರ ಪ್ರಯತ್ನ. ಎನ್ನುವುದಾದರೆ ಅದು ಪ್ರತ್ಯೇಕ.

ಶ್ರೀ ಹೆಚ್. ವಿಕಾಂತಯ್ಯ : ಸಚಿವರನ್ನು ನಾನು ಬಹಳ ವಿನಯದಿಂದ ಕೇಳುತ್ತೇನೆ. ಲಾಗ್ ಬುಕ್‌ನಲ್ಲಿ ತಾವು ನೋಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಇಲ್ಲಿ ನಮಗೆ ಬಂದಂಥ ಮಾಹಿತಿ ಪ್ರಕಾರ ನಾವು ಹೇಳಿದ್ದೇವೆ. ನಮ್ಮ ಮಾಹಿತಿ ಸರಿಯಲ್ಲವೆಂದು ತಾವು ಹೇಳುತ್ತೀರಿ. ಆದರೆ ನಮಗೆ ಅಂದರೆ ಸರ್ಕಾರಕ್ಕೆ ಬಂದ ಮಾಹಿತಿ ಪ್ರಕಾರ ಅವರು ಆ ಡಿಫೇಕ್ಟ್‌ನ್ನು ಅಬ್ಸರ್ವ್ ಮಾಡಿ ಅದನ್ನು ಸರಿಪಡಿಸಲಿಕ್ಕೆ ತಕ್ಷಣ ಕಾರ್ಯಕ್ರಮ ತೆಗೆದುಕೊಂಡರು. ಕಾರ್ಯಕ್ರಮ ತೆಗೆದುಕೊಂಡ ಮೇಲೆ ಅದು ಸರಿಹೋಯಿತು. ತಾವು ಲಾಗ್‌ಬುಕ್‌ನ್ನು ನೋಡಿ. ಅದನ್ನು ತಿದ್ದುಪಡಿ ಮಾಡಿದ್ದಾರೆಂದು ಒಂದು ಆಪಾದನೆ ಮಾಡಿದ್ದೀರಿ. ಆ ಲಾಗ್ ಬುಕ್ಕಿನ ಬಗ್ಗೆ ನಾವು ವಿಚಾರ ಮಾಡೋಣ.

ವಿಷಯ(ii) : ಸೊರಬ ತಾಲ್ಲೂಕಿನ ಮರೂರು ಗ್ರಾಮದಲ್ಲಿ ಸಾಗುವಾನಿ ನಾಟಾಗಳನ್ನು ಅರಣ್ಯದಿಂದ ಅಕ್ರಮವಾಗಿ ಕದಿದು ಸಾಗಿಸಿರುವುದು

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ನಾವು ನಿಲುವಳಿ ಸೂಚನೆ ಕಳುಹಿಸಿದಾಗ ಸೊರಬ ತಾಲ್ಲೂಕಿನಲ್ಲಿ ಕಳ್ಳಸಾಗಾಣಿಕೆ ಆಗಿರುವ ಬಗ್ಗೆ ರಿಪ್ಲೈ ಮಾಡುತ್ತೇವೆಂದು ಹೇಳಿದ್ದರು. ಸೊರಬ ತಾಲ್ಲೂಕಿನಲ್ಲಿ ಕೆಲವು ಮಂಡಲ ಪಂಚಾಯ್ತಿ ಸದಸ್ಯರು ಸೇರಿಕೊಂಡು ಕಾಡಿನಲ್ಲಿ ಮರ ಕಡಿಯುವಂಥ ಸಂದರ್ಭದಲ್ಲಿ ಪತ್ರಕರ್ತರು ಹೋಗಿ ಅವರನ್ನು ಹಿಡಿದು ಕಂಪ್ಲೆಂಟ್ ಕೊಟ್ಟ. ಅವರನ್ನೇ ಅಪರಾಧಿಗಳನ್ನಾಗಿ ಮಾಡಿ ಜೈಲಿಗೆ ಕಳುಹಿಸುವ ಕೆಲಸ ನಡೆಯುತ್ತಿದೆ. ಈ ಬಗ್ಗೆ ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಈ.ಟಿ. ಶಂಬುನಾಥ್ (ಅರಣ್ಯ ಇಲಾಖೆ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಸೊರಬ ತಾಲೂಕಿನ ಮರೂರು ಗ್ರಾಮದಲ್ಲಿ ಬಸವಣ್ಣನ ದೇವಸ್ಥಾನವಿದ್ದು, ಈ ದೇವಸ್ಥಾನದ ಹಿಂದೆ ಇದ್ದ ಮೂರು ಸಾಗುವಾನಿ ಮರಗಳನ್ನು ಅಕ್ರಮವಾಗಿ ಕಡಿತಲೆ ಮಾಡಲಾಗಿದೆ. ಕಡಿತಲೆಯಾದ 3 ಮರಗಳಲ್ಲಿ, 2 ಮರಗಳು ಕಾಡು ಪ್ರದೇಶದಲ್ಲಿ ಅರಣ್ಯ ಇಲಾಖೆಯ ವ್ಯಾಪ್ತಿಗೆ ಬರುತ್ತಿದ್ದು, ಉಳಿದ 1 ಮರ ಮರೂರು ಗ್ರಾಮ ಪಂಚಾಯತಿಯ ವ್ಯಾಪ್ತಿಗೆ ಬರುತ್ತದೆ. ಕಡಿತಲೆ ಬಗ್ಗೆ ಸಾಗರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಸಾಗರದ ಮನೋಭೂಮಿ ಎಂಬ ಪತ್ರಿಕೆಯ ಸುದ್ದಿಗಾರರಾದ ಶ್ರೀ ಶೆಟ್ಟಿಯವರು ದೂರವಾಣಿ ಮುಖಾಂತರ ತಿಳಿಸಿದ ವರ್ತಮಾನದ ಮೇಲೆಗೆ ದಿನಾಂಕ 3-9-1991 ರಂದು ಸ್ಥಳಕ್ಕೆ ಭೇಟಿ ನೀಡಿದಾಗ ಕಡಿತಲೆಯಾದ ಮರಗಳು ಸ್ಥಳದಲ್ಲೇ ಇರುವುದು ಕಂಡುಬಂದಿದ್ದು, ಇವುಗಳನ್ನು ಅಲ್ಲಿಂದ ಸಾಗಿರಿ ಸೊರಬ ವಲಯ ಅರಣ್ಯಾಧಿಕಾರಿಯವರ ಕಛೇರಿಯ ಅವರಣದಲ್ಲಿ ಇಡಲಾಗಿದೆ. ಈ ಪ್ರಕರಣದಲ್ಲಿ ಅನುಮಾನವಿದ್ದ ಶ್ರೀ ಭಂಡಾರಿ ತಿಮ್ಮಪ್ಪ ಬಿನ್ ಕರಿಯಪ್ಪ ಎಂಬುವರ ವಿರುದ್ಧ ಕೇಸು ದಾಖಲು ಮಾಡಿಕೊಂಡು ವಿಚಾರಣೆ ನಡೆಸಲಾಗುತ್ತಿದೆ.